# ವಿಶಾಲ ಕ್ಯಾನ್ವಾಸ್



ವಿನ್ಸೆಂಟ್, ನಿನ್ನ ಕಲ್ಪನೆಯ ಕಣ್ಣುಗಳಿಗೆ
ಅದೆಷ್ಟು ಭಾವನೆಗಳ ಬಣ್ಣಗಳು
ನಿನ್ನ ದೇಹದ ನರತಂತುಗಳಲಿ
ಬದುಕಿನಾಟದ ಬಂಡಿಗೆ ಅದೆಷ್ಟು ದಾರಿಗಳು
ಮುಗಿಲೆತ್ತರಕೆ ಚಿಮ್ಮುವ ಸಮುದ್ರದಲೆಗಳು
ಕವಲೊಡೆದಷ್ಟು ಬೆರಗಾಗುವ ನನ್ನದೇ ದಾರಿಗಳು

ಕಣ್ಣ ಸೆಲೆಗಳಲಿ ಮನೆ ಮಾಡಿವೆ ಸಾವಿರಾರು
ಬಣ್ಣ ಬಣ್ಣದ ಪತಂಗಗಳು
ಒಮ್ಮೆ ಚಂದಿರನಾಗಿ, ಸೂರ್ಯನಾಗಿ, ನಕ್ಷತ್ರವಾಗಿ
ನಮ್ಮನ್ನು ನಾವೇ ಸುತ್ತುವರಿಯುತ್ತಾ ಗ್ರಹಗಳಂತೆ

ಒಮ್ಮೊಮ್ಮೆ ಮರವಾಗಿ ಆಗಸದ
ಗೆಳೆಯರನು ಸ್ಪರ್ಶಿಸುವಾಗ ಅದೇ
ಭಾವ ಸ್ಪಂದನ, ಮತ್ತದೇ ತಿರುಗುವಿಕೆ
ನಮ್ಮೊಂದಿಗೆ ನಾವೇ

ಕಡುಹಳದಿ, ನೀಲಿ, ಕಪ್ಪು
ನಡುವೆ ಸುಳಿವ ಮೂಕ ಒಳ ಸುಳಿವು
ಆಕಾಶದಲಿ ಈಜಾಡುವ ನಿನ್ನ ನೀಲ ನೋಟ
ಅವೆಲ್ಲ ನನ್ನವೇ ಆಗುವ ಆಪ್ತತೆ.

ನಿನ್ನೊಳಗೆ ಅದೆಷ್ಟೋ ರೇಖೆಗಳು
ಹಾಗೆ ಉಳಿದಿವೆ
ಭಾವನೆಗಳ ಒಳ ಅಂತರಂಗದ ಪ್ಯಾಲೆಟ್‌ನಲ್ಲಿ
ಬಣ್ಣಗಳನ್ನು ಅದ್ದಿ ತಿದ್ದಿ ತೀಡಿದ ಅವು
ನಿಜ ಸಂಬಂಧಗಳ ಅನುಸಂಧಾನಗಳು

ರಾತ್ರಿಯಲಿಕಂಡ ಮಿಂಚುಹುಳ
ಮುಗಿಲೆತ್ತರ ಬೆಳೆದ ಮರ
ಭೂಭಾಗವನ್ನೆಲ್ಲ ಆಕ್ರಮಿಸಿದ ಮನೆ
ಆಕಾಶದ ತುಂಬೆಲ್ಲಾ ನೀರವ ಮೌನ
ನಡುವೆ ಚಂದ್ರ ದರ್ಶನ,
ಮಾಂತ್ರಿಕ ಕುಂಚದ ಚಲನ ವಲನಗಳೆ.

ವಿನ್ಸೆಂಟ್‌ನ ಛಾಯೆ ಎಲ್ಲರೆದೆಯ ಮೂಲೆಯಲಿ
ಮನದ ಚಿತ್ತದಲಿ
ಒಮ್ಮೊಮ್ಮೆ ತಾಯಿಯಾಗಿ, ಹೆಂಡತಿಯಾಗಿ, ಕವಿ,
ಪ್ರೇಮಿಯಾಗಿ
ಕಣ್ಣೀರಿನಲಿ ನನ್ನನ್ನು ನಾನೆ ತೋಯ್ದುಕೊಂಡಂತೆ

ಆಕಾಶದೆತ್ತರಕ್ಕೂ ಮೀರಿದ
ತಡೆರಹಿತ ನಿನ್ನ ವಿಶಾಲ ಕ್ಯಾನ್ವಾಸ್
ನಿನ್ನ ಆದರ್ಶದ ಪ್ಯಾಲೆಟ್‌ನಲ್ಲಿ
ನಲಿವು–ನೋವುಗಳ ಬಣ್ಣಗಳು ಅಮರ
ಒಮ್ಮೆ ನೋಡಿ ಸುಮ್ಮನಾಗುವವಲ್ಲ ಅವು
ಮನಸ್ಸಾಕ್ಷಿಗೆ ಹತ್ತಿರವಾದ ಕಡುಸತ್ಯಗಳು
ನಿದ್ದೆಯಲ್ಲಿಯೂ ಎಚ್ಚರಿಸುವವು.

**ಬಸವರಾಜಚಾರ್ ಕೆ.ಆರ್.**